

## ಮಂಗಳೂರು ವಿಶ್ವವಿದ್ಯಾನಿಲಯ

## ಗಾಂಧಿ ಅಧ್ಯಯನ ಕೇಂದ್ರ, ನೆಹರು ಚಿಂತನ ಕೇಂದ್ರ

ಮತ್ತು

## ಮೂಲ್ಕಿ ಸುಂದರ್ ರಾಮ್ ಶೆಟ್ಟಿ ಕಾಲೇಜು, ಶಿರ್ವ

ಇವರ

ಸಂಯುಕ್ತ ಆಶ್ರಯದಲ್ಲಿ

# ಗಾಂಧಿ ಚಿಂತನ ಯಾನ-2022

ದಿನಾಂಕ: 19.02.2022, ಶನಿವಾರ

ಸ್ಥಳ: ಹಿಂದು ಹಿರಿಯ ಪ್ರಾಥಮಿಕ ಶಾಲೆ, ಶಿರ್ವ



## ಉದ್ಘಾಟನೆ : ಪೂರ್ವಾಹ್ನ 10 ಗಂಟೆಗೆ

ಉದ್ಘಾಟನೆ : **ಪ್ರೊ. ಪಿ. ಎಸ್. ಯಡಪಡಿತ್ತಾಯ**
ಮಾನ್ಯ ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ

ಅಧ್ಯಕ್ಷತೆ : **ಶ್ರೀ ವಿ. ಸುಬ್ಬಯ್ಯ ಹೆಗ್ಡೆ**
ಸಂಚಾಲಕರು, ವಿದ್ಯಾವರ್ಧಕ ಸಂಘ (ರಿ.), ಶಿರ್ವ

ಗೌರವ ಉಪಸ್ಥಿತಿ : **ಶ್ರೀ ಸುರೇಶ್ ಶೆಟ್ಟಿ ಗುರ್ಮೆ**
ಅಧ್ಯಕ್ಷರು, ಸ್ಥಳೀಯ ಆಡಳಿತ ಮಂಡಳಿ, ವಿದ್ಯಾವರ್ಧಕ ಆಂಗ್ಲ ಮಾಧ್ಯಮ ಶಾಲೆ, ಶಿರ್ವ

**ಪ್ರೊ. ವೈ. ಭಾಸ್ಕರ್ ಶೆಟ್ಟಿ**
ಆಡಳಿತಾಧಿಕಾರಿಗಳು, ವಿದ್ಯಾವರ್ಧಕ ಸಂಘ (ರಿ.), ಶಿರ್ವ

**ಡಾ. ನಯನ ಎಂ. ಪಕ್ಕಳ**
ಪ್ರಾಂಶುಪಾಲರು, ಎಂ.ಎಸ್.ಆರ್.ಎಸ್ ಕಾಲೇಜು, ಶಿರ್ವ

**ಪ್ರೊ. ಕೆ. ಜಿ. ಮಂಜುನಾಥ್**
ಕಾರ್ಯಕ್ರಮ ಸಂಯೋಜಕರು

**ಪ್ರೊ. ರಾಜಾರಾಮ ತೋಳ್ಪಾಡಿ**
ಪ್ರಭಾರ ನಿರ್ದೇಶಕರು, ನೆಹರು ಚಿಂತನ ಕೇಂದ್ರ,
ಮಂಗಳೂರು ವಿಶ್ವವಿದ್ಯಾನಿಲಯ

**ಕಿಶೋರ್ ಕುಮಾರ್ ಸಿ. ಕೆ.**
ಕುಲಸಚಿವರು,
ಮಂಗಳೂರು ವಿಶ್ವವಿದ್ಯಾನಿಲಯ

**ಆಡಳಿತ ಮಂಡಳಿ, ಪ್ರಾಂಶುಪಾಲರು, ಬೋಧಕ ಮತ್ತು ಬೋಧಕೇತರ ವೃಂದ ಮತ್ತು ವಿದ್ಯಾರ್ಥಿಗಳು**

# ಗಾಂಧಿ ಚಿಂತನ ಯಾನ

ಮೋಹನ್ ದಾಸ್ ಕರಮಚಂದ ಗಾಂಧಿ (1869–1948) 20ನೇ ಶತಮಾನದ ಅತ್ಯಂತ ಪ್ರಮುಖ ಚಿಂತಕರಲ್ಲಿ ಒಬ್ಬರು. ಅವರು ಭಾರತದ ಸ್ವಾತಂತ್ರ್ಯ ಹೋರಾಟದ ನಾಯಕತ್ವವನ್ನು ವಹಿಸಿದರು ಹಾಗೂ ಅಹಿಂಸಾ ಮಾರ್ಗದಲ್ಲಿ ವಸಾಹತುಶಾಹಿಯ ವಿರುದ್ಧ ಒಂದು ಚಾರಿತ್ರಿಕವಾದ ಹೋರಾಟ ನಡೆಸಿದರು ಎನ್ನುವುದು ಮಾತ್ರ ಅವರ ಹಿರಿಮೆಯಲ್ಲ. ಅವರು ನಮ್ಮ ಕಾಲದ ಅತ್ಯಂತ ಪ್ರಮುಖ ಪ್ರಶ್ನೆಗಳನ್ನು ಮತ್ತು ಸವಾಲುಗಳನ್ನು ಅಪಾರವಾದ ತಾತ್ವಿಕ ಸ್ಪಷ್ಟತೆಯಲ್ಲಿ ಎದುರಿಸಿದರು ಎನ್ನುವುದು ಬಹುಮುಖ್ಯವಾದ ವಿಚಾರ. ನಮ್ಮೆಲ್ಲರನ್ನೂ ಆವರಿಸಿರುವ ಬೌದ್ಧಿಕ ನೆಲೆಯ ಭೋಗ ಸಂಸ್ಕೃತಿಯನ್ನು ನಿರಂತರವಾಗಿ ವಿರೋಧಿಸುತ್ತಾ ಬಂದ ಗಾಂಧೀಜಿಯವರ ಚಿಂತನೆ ಮತ್ತು ಸಾಧನೆ ಬದಲಾದ ಕಾಲಘಟ್ಟದಲ್ಲಿ ಪುನರಾವಲೋಕನಕ್ಕೆ ಯೋಗ್ಯವಾದುದಾಗಿದೆ.

ಇಂಗ್ಲೆಂಡಿನಲ್ಲಿ ಮೊಳಕೆ ಒಡೆದು, ದಕ್ಷಿಣ ಆಫ್ರಿಕಾದಲ್ಲಿ ವಿಕಾಸ ಹೊಂದಿ ಭಾರತದ ರಾಜಕಾರಣದಲ್ಲಿ ಪರಿಪಕ್ವತೆಯನ್ನು ಗಳಿಸಿಕೊಂಡ ಗಾಂಧೀಜಿಯವರ ಸಾರ್ವಜನಿಕ ಬದುಕು ಎಲ್ಲರಿಗೂ ತೆರೆದು ಕೊಂಡಿದೆ. ಈ ದಿಸೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ನೆಹರು ಚಿಂತನ ಕೇಂದ್ರ ಮತ್ತು ಗಾಂಧಿ ಅಧ್ಯಯನ ಕೇಂದ್ರ ಜೊತೆಯಾಗಿ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಇತರ ಅನೇಕ ಸಮಾನ ಮನಸ್ಕ ಶಿಕ್ಷಣ ಸಂಸ್ಥೆಗಳ ಸಹಕಾರದಲ್ಲಿ ಕಾರ್ಯಕ್ರಮಗಳ ಸರಮಾಲೆಯೊಂದನ್ನು ಯೋಜಿಸಿಕೊಂಡಿದೆ. ಗಾಂಧೀಜಿಯವರನ್ನು ಪ್ರೀತಿಸುವ ಹಾಗೂ ವಿಮರ್ಶಾತ್ಮಕವಾಗಿ ಪ್ರಶಂಸಿಸುವ ಎಲ್ಲರೂ ನಮ್ಮ ಈ ಪ್ರಯತ್ನದಲ್ಲಿ ಸಹಭಾಗಿಗಳಾಗಿ ಎಂದು ಕೇಳಿಕೊಳ್ಳುತ್ತೇವೆ.

# ಮೂಲ್ಕಿ ಸುಂದರ್ ರಾಮ್ ಶೆಟ್ಟಿ ಕಾಲೇಜು, ಶಿರ್ವ

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾತಃಸ್ಮರಣೀಯರಾದ ಮೂಲ್ಕಿ ಸುಂದರ್ ರಾಮ್ ಶೆಟ್ಟಿಯವರ ದೂರದರ್ಶಿತ್ವದ ಫಲರೂಪವಾಗಿ 1980ರಲ್ಲಿ ನಮ್ಮ ಕಾಲೇಜು ಆರಂಭಗೊಂಡಿತು. ಶ್ರೇಷ್ಠ ಶಿಕ್ಷಣತಜ್ಞ ಮತ್ತು ನಿಟ್ಟೆ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಶ್ರೀ. ಎನ್. ವಿನಯ್ ಹೆಗ್ಡೆಯವರು ಅಧ್ಯಕ್ಷರಾಗಿರುವ ವಿದ್ಯಾವರ್ಧಕ ಸಂಘ (ರಿ), ಶಿರ್ವ ಇದರ ಆಡಳಿತಕ್ಕೆ ಒಳಪಟ್ಟ ಮೂಲ್ಕಿ ಸುಂದರ್ ರಾಮ್ ಶೆಟ್ಟಿ ಕಾಲೇಜು, ಶಿರ್ವ ಕಳೆದ ನಾಲ್ಕು ದಶಕಗಳಿಂದ ಬಡ, ಗ್ರಾಮೀಣ ಹಾಗೂ ಹಿಂದುಳಿದ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಕನಸನ್ನು ಸಾಕಾರಗೊಳಿಸುತ್ತಿರುವ ವಿದ್ಯಾಸಂಸ್ಥೆ. ಬಿ.ಎ ಹಾಗೂ ಬಿ.ಕಾಂ ಪದವಿ ಕೋರ್ಸ್‌ಗಳನ್ನು ಅವ್ಯಾಹತವಾಗಿ ನಡೆಸಿಕೊಂಡು ಬಂದಿರುವ ನಮ್ಮ ಈ ಕಾಲೇಜು ನ್ಯಾಕ್ ಬಿ++ ಗ್ರೇಡ್ ಮಾನ್ಯತೆಯನ್ನು ಪಡೆದಿದೆ. ಮಂಗಳೂರು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವ ಕಾಲೇಜು ಅನೇಕ ಪ್ರಥಮಗಳನ್ನು ಸಾಧಿಸಿದೆ.

ಈ ದಿಸೆಯಲ್ಲಿ 'ಗಾಂಧಿ ಚಿಂತನ ಯಾನ–2022' ಸರಣಿಯ ಉದ್ಘಾಟನಾ ಕಾರ್ಯಕ್ರಮದ ಆಯೋಜನೆಯ ಅವಕಾಶ ನಮ್ಮ ಸಂಸ್ಥೆಗೆ ದೊರೆತಿರುವುದು ಹೆಮ್ಮೆಯ ವಿಷಯವಾಗಿದೆ. ಆ ಮೂಲಕ ಯುವ ಸಮುದಾಯಕ್ಕೆ ಗಾಂಧೀಜಿ ಕೊಡುಗೆಯನ್ನು ಮನವರಿಕೆ ಮಾಡಿಸುತ್ತಾ ನಮ್ಮೆಲ್ಲರ ಸಾಮುದಾಯಿಕ ಪ್ರಜ್ಞೆಯನ್ನು ಜಾಗೃತವಾಗಿರಿಸಿಕೊಳ್ಳುವ ಪ್ರಯತ್ನವನ್ನು ಹಸಿರಾಗಿರಿಸುವ ಉದ್ದೇಶ ನಮ್ಮದು.

**ಪೂರ್ವಾಹ್ನ 11:00ರಿಂದ**

**ಗಾಂಧಿ ಅಂದು ಇಂದು** – **ಶ್ರೀ ವಿನೀತ್ ಕುಮಾರ್,** ಸಂಯೋಜಕರು, ಗಾಂಧಿ ಅಧ್ಯಯನ ಕೇಂದ್ರ, ಮಣಿಪಾಲ ವಿಶ್ವವಿದ್ಯಾನಿಲಯ

**ಗೀತ ಗಾಯನ** – **ಕಾಲೇಜು ವಿದ್ಯಾರ್ಥಿಗಳಿಂದ**

**ಗಾಂಧಿ ಚಿಂತನೆ** – **ಡಾ. ರಾಜಶೇಖರ್ ಹಳೇಮನೆ,** ಕನ್ನಡ ಪ್ರಾಧ್ಯಾಪಕರು, ಎಸ್.ಡಿ.ಎಂ. ಕಾಲೇಜು, ಉಜಿರೆ

**ಗೀತ ಗಾಯನ** – **ಕಾಲೇಜು ವಿದ್ಯಾರ್ಥಿಗಳಿಂದ**

**ಭೋಜನ ವಿರಾಮ**

**ಮಧ್ಯಾಹ್ನ 2:00ರಿಂದ**

**ಗಾಂಧಿ ಮತ್ತು ಹೆಣ್ಣುತನ** – **ಶ್ರೀಮತಿ ಅಭಿಲಾಷ ಎಸ್,** ಪ್ರಾಂಶುಪಾಲರು, ಎಸ್.ಎಮ್.ಎಸ್. ಆಂಗ್ಲ ಮಾಧ್ಯಮ ಶಾಲೆ, ಬ್ರಹ್ಮಾವರ

**ಗೀತ ಗಾಯನ** – **ಕಾಲೇಜು ವಿದ್ಯಾರ್ಥಿಗಳಿಂದ**

**ಲೋಕ ದೃಷ್ಟಿಯಲ್ಲಿ ಗಾಂಧಿ** – **ಶ್ರೀ ಪ್ರಶಾಂತ್ ನೀಲಾವರ,** ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪದವಿ ಕಾಲೇಜು, ಕೋಟ

**ರಾಷ್ಟ್ರ ಗೀತೆ** –



ಸಹಕಾರ : **ಗ್ರಾಮ ಪಂಚಾಯತ್, ಶಿರ್ವ ಮತ್ತು ಮಹಿಳಾ ಮಂಡಲ, ಶಿರ್ವ**



# ಮಂಗಳೂರು ವಿಶ್ವವಿದ್ಯಾನಿಲಯ

## ಗಾಂಧಿ ಅಧ್ಯಯನ ಕೇಂದ್ರ, ನೆಹರು ಚಿಂತನ ಕೇಂದ್ರ

ಮತ್ತು

## ಮೂಲ್ಕಿ ಸುಂದರ್ ರಾಮ್ ಶೆಟ್ಟಿ ಕಾಲೇಜು, ಶಿರ್ವ

ಸಂಯುಕ್ತ ಆಶ್ರಯದಲ್ಲಿ

# ಗಾಂಧಿ ಚಿಂತನ ಯಾನ-2022

ತೆರೆದ ಅಂಚೆ

ರಿಗೆ,

..............................................................................................

..............................................................................................

..............................................................................................